**O.S. 49-24** **DW-2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 06.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ A V B, ವಕೀಲರಿಂದಃ**

6. ಯುನಿಯನ್ ಬ್ಯಾಂಕಿನ ಅಕೌಂಟ ನಂಃ 520101260111011493 ಖಾತೆಯಲ್ಲಿ ಇಲ್ಲಿಯವರೆಗೆ ಎಷ್ಟು ಹಣವಿದೆ ಎಂದು ನೋಡಿಕೊಂಡು ಬಂದಿಲ್ಲ. ನಮ್ಮ ತಂದೆ ಮರಣ ಹೊಂದಿದ ನಂತರ ಸದರಿ ಖಾತೆಯನ್ನು ನಾವು ಚಲಾವಣೆ ಮಾಡಿಲ್ಲ. ವಾರಸಾ ಪ್ರಮಾಣ ಪತ್ರ ಪಡೆದಿದ್ದೇವೆ. ವಾರಸಾ ಪ್ರಕಾರ ನಮ್ಮ ಹೆಸರಿನಲ್ಲಿ ಚರ ಹಾಗೂ ಸ್ಥಿರ ಆಸ್ತಿಗಳನ್ನು ವರ್ಗಾವಣೆ ಮಾಡಿಸಿಕೊಂಡಿಲ್ಲ. ನಮ್ಮ ಸಹೋದರ - ಸಹೋದರಿಯರು ಬೇರೆ ಬೇರೆ ಊರುಗಳಲ್ಲಿದ್ದಾರೆ. ನಮ್ಮ ತಾಯಿ ನಮ್ಮ ತಂದೆ ಮರಣ ಹೊಂದಿದ್ದರಿಂದ ಅವರು ಅದರಿಂದ ಹೊರಗಡೆಗೆ ಬಂದಿರುವುದಿಲ್ಲ. ಆ ಕಾರಣದಿಂದ ಖಾತೆ ಮಾಡಿಸಿಕೊಂಡಿಲ್ಲ. ನಾನು ವಾರಸಾ ಮಾಡುವ ಬಗ್ಗೆ ನನ್ನ ಸಹೋದರರನ್ನು ಹಾಗೂ ಸಹೋದರಿಯರನ್ನು ಕೇಳಿಲ್ಲ. ಆಸ್ತಿಗಳ ಬಗ್ಗೆ ಅವರು ನನಗೆ ಅಧಿಕಾರ ನೀಡಿಲ್ಲ. ನಮ್ಮ ತಾಯಿ ಇತ್ತೀಚೆಗೆ ನಿಮ್ಮ ನಿಮ್ಮ ಹೆಸರುಗಳಲ್ಲಿ ಖಾತೆ ಮಾಡಿಸಿಕೊಳ್ಳಿ ಎಂದು ಹೇಳಿದ್ದಾರೆ. ನಾನು ಇತ್ತೀಚೆಗೆ ಮಾತನಾಡಿದ್ದೇನೆ, ಆದರೆ ಮಾತನಾಡಿಲ್ಲ. ತಾಯಿ ಹಾಗೂ ಸಹೋದರರು ಹಾಗೂ ಸಹೋದರಿಯರು ನನಗೆ ಸಾಕ್ಷಿ ನುಡಿಯಲು ಅಧಿಕಾರ ಪತ್ರ ನೀಡಿಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಪ್ರತಿವಾದ ಪತ್ರ ಸಲ್ಲಿಸುವಾಗ ವಾದಿ ತಂದೆ, ಪ್ರತಿವಾದಿ 1 ಹಾಗೂ 2 ರವರ ಖಾತೆಗಳಲ್ಲಿರುವ ಹಣವನ್ನು ನೋಡಿದ್ದೇನೆ. 4 ಕೋಟಿ 81 ಲಕ್ಷ ರೂ. ಗಳಲ್ಲಿ ಶೆಡ್ಯೂಲ್ ಎ ಹಾಗೂ ಬಿ ಆಸ್ತಿಗಳನ್ನು ಖರೀದಿ ಮಾಡಲಾಗಿದೆ ಅಂದರೆ ಸರಿಯಲ್ಲ. 7 ಕೋಟಿ 48 ಸಾವಿರ 560/- ರೂ. ಗಳಲ್ಲಿ ಸಾಲ ತಿರುವಳಿ ಮಾಡಿ ಶೆಡ್ಯೂಲ್ - ಎ ಹಾಗೂ ಬಿ ಆಸ್ತಿಗಳನ್ನು ಖರೀದಿ ಮಾಡಲಾಗಿದೆ. ಹೆಚ್ಚು ಕಡಿಮೆ 4 ಕೋಟಿ ಹತ್ತಿರ ಸಾಲವಿತ್ತು. ಸಾಲ ಯಾರ ಬಳಿ ಇದೆ ಎಂದು ನಮ್ಮ ಹಾಗೂ ಚಿಕ್ಕಪ್ಪ ನವರಿಗೆ ಗೊತ್ತಿತ್ತು. ಸಾಲ ಇದ್ದ ಬಗ್ಗೆ ಪ್ರತಿವಾದ ಪತ್ರದಲ್ಲಿ ಬರೆಯಲಾಗಿದೆ. ಸಾಲದ ಬಗ್ಗೆ ಪ್ರತಿವಾದ ಪತ್ರದಲ್ಲಿ ಬರೆದಿಲ್ಲವೆಂದು ಪ್ರತಿವಾದ ಪತ್ರ ನೋಡಿ ಹೇಳುತ್ತಾರೆ. ಆಸ್ತಿ ಕೊಡಬೇಕಾಗುತ್ತದೆಂದು ಸುಳ್ಳು ಸೃಷ್ಟಿ ಮಾಡಿ ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸಾಲ ಇಲ್ಲದಿದ್ದರೂ ಸಾಲ ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 14 ಕೋಟಿ ಪೈಕಿ ವಾದಿ ಖಾತೆಗೆ 2 ಕೋಟಿ ಮಾತ್ರ ಜಮಾ ಆಗಿದೆ ಅಂದರೆ ಸರಿಯಲ್ಲ.

ಉಳಿದ 3 ಪ್ರತಿವಾದಿಗಳಿಗೆ ತಲಾ 2 ಕೋಟಿ 44 ಲಕ್ಷ 87 ಸಾವಿರ ರೂ. ಗಳನ್ನು ಜಮಾ ಆಗಿದೆ ಅಂದರೆ ಸರಿ. ನಮ್ಮ ತಂದೆ ಖಾತೆಯಲ್ಲಿ 7 ಕೋಟಿ 48 ಸಾವಿರದಾ 560/- ರೂ. ಉಳಿದಿದೆ ಅಂದರೆ ಸರಿ. ನಮ್ಮ ಖಾತೆಯಿಂದ ದಾವಾ ಎ - ಹಾಗೂ ಬಿ ಶೆಡ್ಯೂಲ್ -ಆಸ್ತಿಗಳನ್ನು ಖರೀದಿ ಮಾಡಲು ಹಣ ಹೋಗಿದೆ ಅಂದರೆ ಸರಿ. ಸಾಕ್ಷಿ ಸ್ವತಃ ಹೇಳುತ್ತಾರೆ ಸಾಲ ತಿರುವಳಿ ಉಳಿದ ಹಣದಲ್ಲಿ ನಮ್ಮ ಆಸ್ತಿ ಖರೀದಿ ಮಾಡಿದ್ದಾರೆ. ನಮ್ಮ ಖಾತೆಯಿಂದ ನಮಗೆ 2 ಕೋಟಿ 44 ಲಕ್ಷ ರು. 87 ಸಾವಿರ ರೂ. ಬರುತ್ತದೆ. 2 ಕೋಟಿ 44 ಲಕ್ಷ ರು. 87 ಸಾವಿರ ರೂ.0 ಹಣಕ್ಕೆ ಸಂಬಂಧಪಟ್ಟಂತೆ ವಾದಿ ಯಾವುದೇ ಕೇಸ ಹಾಕಿಲ್ಲ ಅಂರದೆ, ಅದೇ ಆಸ್ತಿ ಮೇಲೆ ಕೇಸ ಹಾಕಿದ್ದಾರೆ. ಅದೇ ರೀತಿ ವಾದಿ ಹಾಗೂ ಪ್ರತಿವಾದಿಗಳು 2 ಕೋಟಿ 44 ಲಕ್ಷ ರು. 87 ಸಾವಿರ ರೂ. ಆಸ್ತಿ ಖರೀದಿ ಮಾಡಿದ್ದಾರೆ ಅಂದರೆ ಸರಿ. ವಾದಿ ಹಾಗೂ ಪ್ರತಿವಾದಿಗಳು ತಮ್ಮ ಹಣ 2 ಕೋಟಿ 44 ಲಕ್ಷ ರೂ. 87 ಸಾವಿರ ರೂ. ಗಳಲ್ಲಿ ಹಿಡಿದಂತಹ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿಯಲ್ಲ. 4 ಕೋಟಿ 81 ಲಕ್ಷ ರೂ. ಉಳಿದ ಹಣದಲ್ಲಿ ಖರೀದಿ ಮಾಡುವ ಹಣದಲ್ಲಿ ದಾವೆ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ. 4 ಕೋಟಿ 81 ಲಕ್ಷ ರೂ. ಗಳ ಮೇಲೆ ಎಲ್ಲರ ಹಕ್ಕು ಇದೆ ಅಂದರೆ ಸರಿಯಲ್ಲ. ಕೆ ಐ ಡಿ ಬಿ ಗೆ ಹೋದ ಆಸ್ತಿ ಎಲ್ಲರಿಗೆ ಸಂಬಂಧಪಟ್ಟಂತಹ ಆಸ್ತಿ ಅಂದರೆ ಸರಿ. ಪರಿಹಾರದ ಹಣದಲ್ಲಿ ಎಲ್ಲರಿಗೂ ಸಮನಾದ ಹಕ್ಕು ಇದೆ ಅಂದರೆ ಸರಿ. ಸಾಲ ತಿರುವಳಿ ಮಾಡಿ ಉಳಿದ ಹಣದಲ್ಲಿ ಸಮನಾಗಿ ಹಂಚಿಕೊಂಡಿದ್ದಾರೆಂದು ಹೇಳುತ್ತಾರೆ. ಸಾಲವಿದೆ ಎಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿ. ದಾವಾ ಆಸ್ತಿ ಮೇಲೆ ಸಮನಾದ ಹಕ್ಕು ಎಲ್ಲರಿಗೂ ಇದೆ ಅಂದರೆ ಸರಿಯಲ್ಲ.

ಪ್ರತಿವಾದಿ ಪತ್ರ ಓದಿದ್ದೇನೆ. ಪ್ರತಿವಾದ ಪತ್ರದಲ್ಲಿ True facts ಎಂದು ಬರೆದಿಲ್ಲ. ಪ್ರತಿವಾದ ಪತ್ರದಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ನನ್ನ ಸಹೋದರ - ಸಹೋದರಿಯರು ಅಧಿಕಾರ ನೀಡಿಲ್ಲ ಅಂದರೆ ಸರಿಯಲ್ಲ. ವಾದಿಗಳಿಗೆ ಮೋಸ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಗಳಿಗೆ ಶೇಕಡಾ 1/4 ರಷ್ಟು ಪಾಲು ಕೊಡಲು ಕಾನೂನು ಬದ್ಧವಾಗಿ ಬಾಧ್ಯಸ್ಥರು ಇರುತ್ತೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.